**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ರಾಣೇಬೆನ್ನೂರು.</u>**

**<u>ಸಿಸಿ ನಂಬರಃ 67/2024</u>**

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-5

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸ್ಟೀವನ್ |
| **ತಂದೆ/ಗಂಡನ ಹೆಸರು** | : | ಚಂದ್ರಕಾಂತ |
| **ವಯಸ್ಸು** | : | 46 ವರ್ಷ |
| **ಉದ್ಯೋಗ** | : | ಆಹಾರ ನಿರೀಕ್ಷಕರು |
| **ವಾಸ** | : | ರಾಣೇಬೆನ್ನೂರು |

**<u>ದಿನಾಂಕಃ 05-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ</u>**

ನಾನು ರಾಣೇಬೆನ್ನೂರು ತಾಲೂಕು ಆಪೀಸಿನಲ್ಲಿ ಆಹಾರ ನಿರೀಕ್ಷಕನಾಗಿ 2021 ರಿಂದ ಇಲ್ಲಿಯವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 14-06-2022 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ರಾಣೇಬೆನ್ನೂರಿನ ತಾಲೂಕು ಕಚೇರಿಯಲ್ಲಿ ನಮ್ಮ ಆಪೀಸಿನಲ್ಲಿದ್ದಾಗ ನಮ್ಮ ಇಲಾಖೆಯ ಆಹಾರ ನಿರೀಕ್ಷಕರಾದ ಚಾಸಾ-1 ರವರು ನನಗೆ ಒಂದು ಬಾತ್ಮಿ ಬಂದಿದೆ ಕೊಟ್ರೇಶ್ವರ ಮಠದ ಹತ್ತಿರ ಗಂಗಪುರ ರಸ್ತೆಯ ಹತ್ತಿರ ಒಂದು ಲಾರಿ ನಿಂತಿದ್ದು ಅಕ್ರಮವಾಗಿ ಅಕ್ಕಿ ಸಂಗ್ರಹ ಮಾಡುತ್ತಿದ್ದಾರೆ ಹೋಗಿ ಪರಿಶೀಲನೆ ಮಾಡಬೇಕು ಎಂದು ತಿಳಿಸಿದರು. ಅದರಂತೆ ನಾನು ಚಾಸಾ-1 ರವರು, ಚಾಸಾ-5 ಹಾಗೂ ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಎಲ್ಲರಿಗೂ ವಿಚಾರ ತಿಳಿಸಿ ನಂತರ ನಾವೆಲ್ಲರೂ ನಮ್ಮ ಪ್ರತ್ಯೇಕ ಬೈಕುಗಳಲ್ಲಿ ಸ್ಥಳಕ್ಕೆ ಹೋಗಿ ನೋಡಿದಾಗ ಗಂಗಾಪುರ ರಸ್ತೆಯ ಪಕ್ಕದಲ್ಲಿ ನಿಂತಿದ್ದ ಒಂದು ಲಾರಿಯನ್ನು ನೋಡಿದಾಗ ಲಾರಿಯ ನಂಬರು ಕೆಎ-40-ಎ-7954 ಆಗಿತ್ತು. ಲಾರಿಯ ಕೆಳಗೆ ನಿಂತಿದ್ದನು. ಆತನನ್ನು ವಿಚಾರಿಸಿದಾಗ ದೀಪಕ್ ಹರವಿ ಶೆಟ್ಟರ ಎಂದು ಹೇಳಿದನು. ಲಾರಿಯ ಬಗ್ಗೆ ವಿಚಾರಿಸಿದಾಗ ನನ್ನದೇ ಎಂದು ಹೇಳಿದನು. ಲಾರಿಯಲ್ಲಿ ಎನಿದೆ ಎಂದು ಕೇಳಿದಾಗ ಅಕ್ಕಿ ಇದೆ ಎಂದು ಹೇಳಿದನು. ನಂತರ ನಮಗೆ ಸಂಶಯ ಬಂದು ಎರಡು ಚೀಲ ಒಪನ್ ಮಾಡಿ ನೋಡಿದಡಗ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ವಿತರಣೆ ಮಾಡುವ ಪಡಿತರ ಆಗಿತ್ತು. ಆಗ ಆರೋಪಿತನ ಬಳಿ ಎನಾದರೂ ಅಕ್ಕಿ ಸಾಗಾಣಿಕೆ ಮಾಡಲು ಪಾಸು

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-5

ಪರ್ಮಿಟ್ ಬಿಲ್ಲುಗಳು ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ಹೇಳಿದನು. ನಂತರ ಕೆ ಎಫ್ ಸಿ ಎಸ್ ಸಿ ನಿಗಮದ ಗೋಡಾನ್ ನಿಂದ ಹಮಾಲಿಗಳನ್ನು ಕರೆಯಿಸಿ ಎಲ್ಲಾ ಪ್ರತಿಯೊಂದು ಚೀಲಗಳನ್ನು ಕೆಳಗೆ ಇಳಿಸಿ ಪರಿಶೀಲನೆ ಮಾಡಿದಾಗ ಪಡಿತರ ಅಕ್ಕಿ ತುಂಬಿರುವುದು ಕಂಡು ಬಂದಿತು. ಆ ಚೀಲಗಳನ್ನು ಏಣಿಕೆ ಮಾಡಿದಾಗ 334 ಚೀಲಗಳು ಇದ್ದವು. ನಂತರ ಎಲ್ಲಾ 334 ಚೀಲಗಳನ್ನು ಲಾರಿಗೆ ಲೋಡ್ ಮಾಡಿ ಆರೋಪಿತನ ಮುಖಾಂತರ ಅಕ್ಕಿಯ ಚೀಲಗಳು ಹಾಗೂ ಲಾರಿಯ ಮುಖಾಂತರ ಎ ಪಿ ಎಮ್ ಸಿ ವೇ ಬ್ರೀಡ್ಜ ನಲ್ಲಿ ತೂಕ ಮಾಡಿಸಿದಾಗ ಒಟ್ಟು 166.50 ಕ್ವಿಂಟಾಲ್ ಗಳು ಇರುವುದು ಕಂಡು ಬಂದಿತು. ಅದರ ಒಟ್ಟು ಅಂದಾಜು ಮೌಲ್ಯ 3,66,300/- ಆಗಿತ್ತು. ನಂತರ ಎಲ್ಲಾ ಅಕ್ಕಿಯ ಚೀಲಗಳನ್ನು ಕೆ ಎಫ್ ಸಿ ಎಸ್ ಸಿ ಗೋಡಾನ್ ನಲ್ಲಿ ದಾಸ್ತಾನು ಮಾಡಲಾಯಿತು. ಆ ವೇಳೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತ ಸ್ಥಳದಿಂದ ಹೊರಟು ಹೋದನು. ನಾವು ಕೋಟೆಶ್ವರ ಮಠದ ಹತ್ತಿರ ಲಾರಿ ಮತ್ತು ಅಕ್ಕಿಯ ಚೀಲಗಳನ್ನು ಜಪ್ತಿ ಮಾಡುವ ಕಾಲಕ್ಕೆ ಅಕ್ಕಿಯನ್ನು ಮಾದರಿಗಾಗಿ ಸಂಗ್ರಹ ಮಾಡಲಾಗಿತ್ತು. ಆ ಸಮಯದಲ್ಲಿ ಮಹಜರ್ ಮಾಡಲಾಯಿತು. ನಾನು ಸಹ ಮಹಜರ್ ಗೆ ಸಹಿ ಮಾಡಿರುತ್ತೇನೆ. ನಂತರ ಮಾದರಿ ಅಕ್ಕಿಯ ಜೊತೆ ಚಾಸಾ-1 ರವರು ಗ್ರಾಮಾಂತರ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ. ಸಾಕ್ಷಿಗೆ ನಿ ಪಿ -2 ಮಹಜರ್ ನ್ನು ತೋರಿಸಲಾಯಿತು. ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದರಲ್ಲಿರುವ ತನ್ನ ಸಹಿಯನ್ನು ನಿ ಪಿ 2 ಇ ಎಂದು ಗುರುತಿಸಲಾಯಿತು. ಅಕ್ರಮವಾಗಿ ಪಡಿತರ ಅಕ್ಕಿಯನ್ನು ತುಂಬಿದ ಚೀಲಗಳನ್ನು ಸಾಗಾಣಿಕೆ ಮಾಡುತ್ತಿದ್ದ ಲಾರಿಯ ಚಾಲಕ ಆರೋಪಿತ ನ್ಯಾಯಾಲಯದ ಮುಂದೆ ಹಾಜರಿದ್ದಾನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದಾರೆ. ನಾನು ತನಿಖಾಧಿಕಾರಿಗೆ ಈ ಕೇಸಿನ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದಿರುವ ಅಕ್ಕಿ ಇರುವ ಪ್ಲಾಸ್ಟಿಕ್ ಕವರನ್ನು ಸಾಕ್ಷಿಗೆ ತೋರಿಸಲಾಯಿತು. ಗುರುತಿಸಿದ್ದಾರೆ. ಅದನ್ನು ಈಗಾಗಲೇ ಎಮ್ ಒ -1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ರಾಣೇಬೆನ್ನೂರು ತಾಲೂಕಿನಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ತಾಲುಕು ಕಚೇರಿಯಲ್ಲಿ ಎಷು ಜನರು ಆಹಾರ ನಿರೀಕ್ಷಕರು ಇದ್ದಾರೆ ಎಂದರೆ 4 ಜನರು ಇದ್ದಾರೆ. ಚಾಸಾ-1 ರವರು ನಗರ ಪ್ರದೇಶದಲ್ಲಿ ಆಹಾರ ನಿರೀಕ್ಷಕರಾಗಿ ಕೆಲಸ ಮಾಡುತ್ತಾರೆ. ಕೋಟೆಶ್ವರ ಮಠ ರಾಣೇಬೆನ್ನೂರು ಗ್ರಾಮಾಂತರ ವ್ಯಾಪ್ತಿಗೆ ಬರುತ್ತದೆ. ಈ ಬಗ್ಗೆ ಯಾವುದಾದರೂ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ಹಾಗೆ ಹೇಳುತ್ತೇವೆ.

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-5

ಚಾಸಾ-1 ರವರಿಗೆ ಬಾತ್ಮೀ ಬಂದ ಬಗ್ಗೆ ನಿಮಗೆ ಮಾಹಿತಿ ಇತ್ತೇ ಎಂದರೆ ಇಲ್ಲ. ನಾನು ಅಕ್ಕಿ ಚೀಲಗಳನ್ನು ರೈಡ್ ಮಾಡಿದ ನಂತರ ಅಲ್ಲಿಂದ ಕೆ ಎಫ್ ಸಿ ಎಸ್ ಸಿ ಗೋಡಾನ್ ಗೆ ಹೋಗುವವರೆಗೆ ಚಾಸಾ-1 ರವರ ಜೊತೆ ಇದ್ದೆ ಎಂದರೆ ನಿಜ. ಆ ಕೋಟೆಶ್ವರ ಮಠದ ಅಕ್ಕ ಪ ಕ್ಕ ಅಂಗಡಿ ಮನೆಗಳು, ವಾಸದ ಮನೆಗಳು ಇವೆ ಎಂದರೆ ನಿಜ. ಅಲ್ಲಿ ಸಾಕಷ್ಟು ಜನರು ಇದ್ದರು ಎಂದರೆ ನಿಜ. ಸ್ಥಳದಲ್ಲಿ ಪಂಚರನ್ನು ಕರೆಸಲು ನನಗೆ ಹಾಗೂ ಚಾಸಾ-1 ರವರಿಗೆ ಏನೂ ತೊಂದರೆ ಇರಲಿಲ್ಲ ಎಂದರೆ ಇಲ್ಲ. ಚಾಸಾ-2 ರವರು ನಮ್ಮ ಜೊತೆ ಕೆಲಸ ಮಾಡುವುದಿಲ್ಲ. ಆದರೆ ಆತನಿಗೆ ರೇಷನ್ ಅಂಗಡಿ ಇದೆ. ಚಾಸಾ-2 ಮತ್ತು 3 ರವರು ನಮ್ಮ ಆಹಾರ ಇಲಾಖೆಯ ನಿಯಂತ್ರಣದಲ್ಲಿ ಬರುತ್ತಾರೆ ಎಂದರೆ ನಿಜ.. ಚಾಸಾ-2 ಮತ್ತು ಚಾಸಾ-3 ರವರು ಪಂಚರಾಗಿ ಎಷ್ಟು ಕೇಸಿನಲ್ಲಿ ಕರೆದುಕೊಂಡಿದ್ದೀರಾ ಎಂದರೆ 2 ಕೇಸು. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಹೇಳಿಕೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಲಾರಿಯನ್ನು ದಾಳಿ ಮಾಡಿ ಲಾರಿಯ ಜೊತೆ ಅಕ್ಕಿಯ ಚೀಲಗಳನ್ನು ಗೋಡಾನ್ ಗೆ ತೆಗೆದುಕೊಂಡು ಹೋದಾಗ ಎಷ್ಟು ಸಮಯ ಆಗಿತ್ತು ಎಂದರೆ ಬೆಳಿಗ್ಗೆ 11.00 ಗಂಟೆಯಿಂದ 06.30 ಗಂಟೆಯಾಯಿತು. ಆ ಸಮಯದಲ್ಲಿ ಆರೋಪಿತ ಒಡಿ ಹೋಗಲಿಲ್ಲ ಎಂದರೆ ನಿಜ. ಚಾಸಾ-1 ರವರು ಆರೋಪಿತನನ್ನು ಸುಮಾರು ಎಷ್ಟು ಗಂಟೆಗಳ ಕಾಲ ವಿಚಾರ ಮಾಡಿದರು ಎಂದರೆ 10 ನಿಮಿಷ ವಿಚಾರಣೆ ಮಾಡಿರುತ್ತಾರೆ. ಆವಾಗ ಯಾವ ಯಾವ ದಾಖಲೆಗಳನ್ನು ಆರೋಪಿತನ ಬಳಿ ಪರೀಶಿಲನೆ ಮಾಡಿದರು ಎಂದರೆ ಆತನು ಯಾವುದೇ ದಾಖಲೆಗಳನ್ನು ತೋರಿಸಲಿಲ್ಲ. ನಿ ಡಿ -1 ಮತ್ತು 2 ದಾಖಲೆಗಳನ್ನು ಚಾಸಾ-1 ರವರಿಗೆ ಆರೋಪಿತ ತೋರಿಸಿದನು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಿನಾಂಕ 09-06-2022 ರ ಜ್ಞಾಪನಾವನ್ನು ತೋರಿಸಿ ಕೇಳಿದಾಗ ಹೊನ್ನಾಳಿ ತಾಲೂಕಿನ ತಹಶೀಲ್ದಾರ ರವರು ಹರಾಜು ಮಾಡಿದ ಸ್ಥಳದಿಂದ ಬಿಡ್ ದಾರರ ವಿಳಾಸಕ್ಕೆ ಸಾಗಾಣೆ ಮಾಡಲು ಅನುಮತಿ ನೀಡಲಾಗಿರುವ ಪತ್ರ ಎಂದರೆ ನಿಜ ಅದನ್ನು ಈಗ ನಿ ಡಿ -3 ಎಂದು, ಹರಾಜಿನಲ್ಲಿ ಖರೀದಿ ಮಾಡಿದ ಬಗ್ಗೆ ಚಲನ್ ತುಂಬಿರುವುದನ್ನು ಚಲನ್ ನ್ನು ನಿ ಡಿ -4 ಎಂದು ಗುರುತಿಸಲಾಯಿತು. ಆರೋಪಿತ ನಿ ಡಿ -1 ರಿಂದ 4 ದಾಖಲೆಗಳನ್ನು ನಮಗೆ ತೋರಿಸಿದ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ಧರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.